ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE 22/9/2020

# ಕೊರೋನಾ ನಡುವೆ ಹೊಸ ರೀತಿಯ ಅಧಿವೇಶನ

## ಸಕಲ ಮುನ್ನೆಚ್ಚರಿಕೆಯ ಕ್ರಮ | ಎಲ್ಲರೂ ಮಾಸ್ಕ್ ಧಾರಿಗಳು | ಶಾಸಕರಿಗೆ ಥರ್ಮಲ್ ಸ್ಕ್ಯಾನ್ | ಆಸನಗಳ ನಡುವೆ ಫೈಬರ್ ಶೀಟ್

• **ಕನ್ನಡಪ್ರಭ ವಾರ್ತೆ** ವಿಧಾನಸೌಧ

ಮುಖಕ್ಕೆ ಗವಸು, ಕೈಗವಸು, ಒಳಗೆ ಪ್ರವೇಶಿಸುವಾಗ ಸ್ಯಾನಿಟೈಸರ್, ಥರ್ಮಲ್ ಸ್ಕ್ಯಾನರ್, ಸದನದ ಒಳಗೆ ಆಸನದ ನಡುವೆ ಎತ್ತರದ ಪಾರದರ್ಶಕ ಫೈಬರ್ ಶೀಟ್ ಅಳವಡಿಕೆ, ಗ್ಯಾಲರಿಯಲ್ಲಿ ಆಸನಗಳ ನಡುವೆ ಅಂತರ, ಕೈಕುಲುಕುವ ಬದಲು ಕೈ ಮುಗಿದು ನಮಸ್ಕಾರ...!

ಇದು ಕೊರೋನಾ ಸೋಂಕಿನ ಲಬ್ಬರದ ನಡುವೆ ಸೋಮವಾರದಿಂದ ಆರಂಭವಾದ ವಿಧಾನಮಂಡಲದ ಉಭಯ ಸದನಗಳಲ್ಲಿ ಕಂಡು ಬಂದ ದೃಶ್ಯಾವಳಿ. ಸರ್ಕಾರದ ಹಲವು ಸುಗ್ರೀವಾಜ್ಞೆ, ವಿಧೇಯಕಗಳಿಗೆ ಸದನದ ಒಪ್ಪಿಗೆ ಪಡೆಯಲೇಬೇಕಿರುವ ಹಿನ್ನೆಲೆಯಲ್ಲಿ ಹತ್ತಾರು ಮುಂಜಾಗ್ರತಾ ಕ್ರಮಗಳ ನಡುವೆ ಆರಂಭವಾದ ಅಧಿವೇಶನ ಸದಸ್ಯರು ಸೇರಿದಂತೆ ಎಲ್ಲರಿಗೂ ಹೊಸ ಬಗೆಯ ಅನುಭವ ತಂದಿತು.

ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿ ಇದ್ದವರಿಗೆ ಮಾತ್ರ ಸದನದ ಒಳಗೆ ಪ್ರವೇಶ ಕಲ್ಪಿಸಿದ್ದು, ಸದಸ್ಯರು ಮಾಸ್ಕ್ ಹಾಗೂ ಫೇಸ್ ಶೀಲ್ಡ್ ಧರಿಸಿದ್ದರು. ಸದಸ್ಯರು ಪರಸ್ಪರ ಕೈ ಕುಲುಕುವ ಬದಲು ಕೈ ಮುಗಿದು ತಮಗೆ ನಿಗದಿಪಡಿಸಿದ ಸ್ಥಳದಲ್ಲಿ ಆಸೀನರಾಗುತ್ತಿದ್ದರು. ಎರಡು ಆಸನಗಳ ನಡುವೆ ಎತ್ತರದ ಫೈಬರ್ ಶೀಟ್ ಅಳವಡಿಕೆಯಿಂದ ಅಕ್ಕಪಕ್ಕ ಕುಳಿತ ಸದಸ್ಯರೊಂದಿಗೆ ಮಾತನಾಡಲು ಅವಕಾಶ ಇರಲೇ ಇಲ್ಲ. ಪ್ರತಿ ಸದಸ್ಯರಿಗೆ ಸ್ಯಾನಿಟೈಸರ್ ಬಾಟಲ್ ವ್ಯವಸ್ಥೆ ಮಾಡಲಾಗಿತ್ತು.



ಮಾಸ್ಕ್ ಧರಿಸಿರುವ ಡಿಸಿಎಂ ಕಾರಜೋಳ, ಸಿಎಂ ಯಡಿಯೂರಪ್ಪ

### ಕೆಲವರ ಗುರುತೇ ಸಿಗಲಿಲ್ಲ!

**ಕೆಲವು ಸದಸ್ಯರು ಮಾಸ್ಕ್, ಫೇಸ್ ಶೀಲ್ಡ್ ಧರಿಸಿ ಹಿರಿಯ ಸದಸ್ಯರಿಗೆ ನಮಸ್ಕರಿಸಿದಾಗ ಗುರುತು ಹಚ್ಚಲು ಆಗದೇ ಯಾರೆಂದು ಪ್ರಶ್ನಿಸಿದ ಪ್ರಸಂಗ ನಡೆಯಿತು!**

ಇನ್ನು ಸಭಾಪತಿ ಹಾಗೂ ಸಭಾಧ್ಯಕ್ಷರ ಬಲ ಭಾಗದಲ್ಲಿ ಇರುವ ಅಧಿಕಾರಿಗಳ ಗ್ಯಾಲರಿಯಲ್ಲಿ ಸೀಟುಗಳ ನಡುವೆ ಅಂತರಕಾದುಕೊಳ್ಳುವವ್ಯವಸ್ಥೆಮಾಡಲಾಗಿತ್ತು. ನಿರ್ಬಂಧಿಸಿದ ಗುರುತಿನ ಪೇಪರ್ ಅಂಟಿಸಿದ ಆಸನ ಬಿಟ್ಟು ಉಳಿದ ಕಡೆ ಕುಳಿತುಕೊಳ್ಳಬಹುದಿತ್ತು. ಕೇವಲ ಹಿರಿಯ ಅಧಿಕಾರಿಗಳಿಗೆ ಮಾತ್ರ ಇಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಇನ್ನು ಈವರೆಗೆ ಪತ್ರಕರ್ತರು ಕುಳಿತುಕೊಳ್ಳುತ್ತಿದ್ದ ಗ್ಯಾಲರಿಯಲ್ಲಿ ಸಹ ಅಧಿಕಾರಿಗಳಿಗೆ ಅವಕಾಶ ನೀಡಲಾಗಿತ್ತು. ಸದಸ್ಯರ ಮೊಗಸಾಲೆಯಲ್ಲಿ ಸದಸ್ಯರನ್ನು ಬಿಟ್ಟು ಬೇರೆ ಯಾರಿಗೂ ಪ್ರವೇಶ ಇರಲಿಲ್ಲ.

**ಕೋವಿಡ್ ನೆಗೆಟಿವ್ ತೋರಿಸಬೇಕು:** ಮೊದಲ ಬಾರಿಗೆ ಮಾಧ್ಯಮ ಪ್ರತಿನಿಧಿಗಳು ಹಾಗೂ ಆಯ್ದ ಅಧಿಕಾರಿಗಳಿಗೆ ಎರಡನೇ ಮಹಡಿಯ ಗ್ಯಾಲರಿಯಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಸಾಲಿನಲ್ಲಿ ಬಂದ ಅಧಿಕಾರಿಗಳನ್ನು ಕೋವಿಡ್ ಪರೀಕ್ಷೆಯ ನೆಗೆಟಿವ್ ವರದಿ ತೋರಿಸಿದ ನಂತರವೇ ಒಳಗೆ ಬಿಡಲಾಗುತ್ತಿತ್ತು. ಮಾಧ್ಯಮ ಪ್ರತಿನಿಧಿಗಳಿಗೆ ಪ್ರವೇಶ ದ್ವಾರದಲ್ಲೇ ತಮ್ಮ ವಿವರ ನಮೂದಿಸಿ ಒಳಗೆ ಬಿಡಲಾಗುತ್ತಿತ್ತು.

### ಭಾರೀ ಸಂಖ್ಯೆ ಶಾಸಕರು ಗೈರು

ವಿಧಾನಮಂಡಲ: ಕೊರೋನಾ ಭೀತಿ ನಡುವೆ ಆರಂಭವಾಗಿರುವ ವಿಧಾನ ಮಂಡಲದ ಉಭಯ ಸದನಗಳ ಅಧಿವೇಶನಕ್ಕೆ ಸೋಂಕು ಹರಡಿರುವ ಸಚಿವರು, ಶಾಸಕರು ಸೇರಿದಂತೆ ಹಲವು ಜನಪ್ರತಿನಿಧಿಗಳು ಗೈರಾಗಿದ್ದರು.

ಸಚಿವರು, ಶಾಸಕರು ಸೇರಿದಂತೆ ವಿಧಾನಸಭೆಯ 120ಕ್ಕೂ ಹೆಚ್ಚು ಸದಸ್ಯರು ಹಾಜರಾಗಿದ್ದು, 90ಕ್ಕೂ ಹೆಚ್ಚು ಸದಸ್ಯರು ಗೈರಾಗಿದ್ದರು. ಅಂತೆಯೇ ವಿಧಾನಪರಿಷತ್‌ನಲ್ಲಿಯೂ 50ಕ್ಕೂ ಹೆಚ್ಚು ಸದಸ್ಯರು ಕಲಾಪಕ್ಕೆ ಹಾಜರಾಗಿದ್ದರು. ಸುಮಾರು 25 ಮಂದಿ ಬಂದಿರಲಿಲ್ಲ.

ಕೊರೋನಾ ಪಾಸಿಟಿವ್ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ, ಸಚಿವರಾದ ಬಸವರಾಜ ಬೊಮ್ಮಾಯಿ, ಕೆ.ಗೋಪಾಲಯ್ಯ, ಭೈರತಿ ಬಸವರಾಜ್, ಪ್ರಭು ಚೌಹಾಣ್ ಸೇರಿದಂತೆ 7 ಸಚಿವರು, ಶಾಸಕ ಎಂ.ಪಿ.ಕುಮಾರಸ್ವಾಮಿ, ಎಸ್.ಆರ್.ವಿಶ್ವನಾಥ್, ಪ್ರಿಯಾಂಕ್ ಖರ್ಗೆ, ಬಸನಗೌಡ ದದ್ದಲ್ ಸೇರಿದಂತೆ 10ಕ್ಕೂ ಹೆಚ್ಚು ಶಾಸಕರು ಹೋಂ ಕ್ವಾರಂಟೈನ್‌ಗೊಳಗಾಗಿದ್ದಾರೆ. ಹೀಗಾಗಿ ಇವರೆಲ್ಲ ಸದನಕ್ಕೆ ಗೈರಾಗಿದ್ದರು. ಇನ್ನು ಕೆಲವರು ಕೊರೋನಾ ಆತಂಕದಿಂದಾಗಿ ಗೈರಾಗಿದ್ದಾರೆ ಎಂದು ಹೇಳಲಾಗಿದೆ.